ಓ ಎಸ್ ನಂಃ 96/2024

ಡಿ. ಡಬ್ಲ್ಯೂಯ- 02

**(ಇಂದು ದಿನಾಂಕ 08.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದ**

ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆಸಿರುವ ವಿಷಯಗಳು ಸರಿ ಮತ್ತು ನಿಜ ಇರುತ್ತವೆ.

ನಾನು ನಿ.ಡಿ.01 ಕ್ಕೆ ಸಾಕ್ಷೀಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷೀ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು **ನಿ.ಡಿ.01 ಎ** ಎಂದು ಗುರುತಿಸಲಾಯಿತು. ವಾದಿಯವರ ತಾಯಿ ನಿ.ಡಿ.01 ಕ್ಕೆ ಸಹಿ ಮಾಡಿರುತ್ತಾರೆ. ಅದನ್ನು **ನಿ.ಡಿ.01 ಬಿ** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

ನಾನು ಗುಲಗಂಜಿ ಕೊಪ್ಪದಲ್ಲಿ ವಾಸವಾಗಿರುತ್ತನೆ. ನಾನು ಭೂಮಾಪಕನಾಗಿರುತ್ತೆನೆ. ನಾನುಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ ಪ್ಲಾಟ ಗಳನ್ನು ಮಾಡುವ ಸಮಯದಲ್ಲಿ ಪರಿಚಯವಾಗಿರುತ್ತಾನೆ. ನಾನ ಪ್ರತಿವಾದಿಗೆ ಸೇರಿದ ಪ್ಲಾಟ್ ಇದೆ ಎಂದು ಅತಳೆ ಮಾಡಿರುವುದಿಲ್ಲ. ಪ್ರತಿವಾದಿಯರ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ವಾದಿಯರ ವೈಯಕ್ತಿಕ ಪರಿಚಯಇರುವುದಿಲ್ಲ. ವಾದಿಯರು ಸುನಿಲನ ಮುಖಾಂತರ ಪರಿಚಯಸ್ತರು. ಸದರಿ ಸುನಿಲ್ ಈ ವ್ಯವಹಾರ ಮಾಡಬೇಕು ಎಂದು ನನಗೆ ಹೇಳಿದ್ದರು. ಹೊಲಾ ಮಾರಾಟ ಮಾಡುವುದಿದೆ ಎಂದು ಸುನಿಲ್ ಹೇಳಿದ್ದನು. ದಾವಾ ಆಸ್ತಿ ಕುರಿತು ಸುನಿಲ್ ಮಾಹಿತಿ ನೀಡಿರುತ್ತಾನೆ. ನಾನು, ಸುನಿಲ್ ಮತ್ತು 02 ನೇ ಪ್ರತಿವಾದಿ ಸೇರಿ ಆಸ್ತಿ ಮಾರಾಟ ಮಾತುಕತೆ ಮಾಡಿರುತ್ತೇವೆ ಎಂದರೆ ಸರಿ. ಆದಿನ ಗುರಯ್ಯ ಇರಲಿಲ್ಲ, ಆತನ

ಹೆಂಡತಿ ಇದ್ದಳು. ಆಸ್ತಿ ಮಾರಾಟದ ವ್ಯವಹಾರದಲ್ಲಿ ಗುರಯ್ಯನ ಹೆಂಡತಿ ಹೊರತುಪಡಿಸಿ ಬೇರೆಯಾರು ಇರಲಿಲ್ಲ ಎಂದರೆ ಸರಿಯಲ್ಲ. ಗುರಯ್ಯ ಸಂಪಿಗೆ ನಗರದಲ್ಲಿ ವಾಸವಾಗಿದ್ದನು. ದಾವಾ ಆಸ್ತಿ ಗುರಯ್ಯನ ಪಿತ್ರಾರ್ಜಿತ ಆಸ್ತಿ ಎಂದು ದಾಖಲೆ ನೋಡಿರುತ್ತೇನೆ. ಪಹಣಿ ಪತ್ರಿಕೆ, ಹಕ್ಕು ಬದಲಾವಣೆ ಪ್ರತಿ ಮತ್ತು ಪಾಲು ವಿಭಾಗ ಪತ್ರ ನೋಡಿರುತ್ತೇನೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ಗೊತ್ತಾಗಿರುತ್ತದೆ ಎಂದರೆ ಸಾಕ್ಷೀ ಪಾಲು ವಿಭಾಗ ಆಗಿರುತ್ತದೆ ಎನ್ನುತ್ತಾರೆ. **ದಾವಾ ಆಸ್ತಿಯಲ್ಲಿ ಗುರಯ್ಯ ನ ಹೆಂಡತಿಗೆ ಹಕ್ಕು ಇಲ್ಲ ಎಂದು ಗೊತ್ತಾಗಿರುತ್ತದೆ ಎಂದರೆ ಸಾಕ್ಷೀಯ ಪರ ವಕೀಲರು ಉತ್ತರ ಹೇಳುತ್ತಿದ್ದಾರೆ, ಅದನ್ನು ಕೇಳಿಸಿಕೂಂಡು ಸಾಕ್ಷೀ ಉತ್ತರ ಹೇಳುತ್ತಿದ್ದಾನೆ.**

ಗುರಯ್ಯ ನಿಗೆ 03 ಜನ ಮಕ್ಕಳು. ಗುರಯ್ಯ ಆಟೋ ಚಾಲಕನಾಗಿರುತ್ತಾನೆ. ಗುರಯ್ಯನಿಗೆ ಆರೋಗ್ಯ ಚೆನ್ನಾಗಿ ಇರುವುದಿಲ್ಲ ಆಸ್ಪತ್ರಗೆ ದಾಖಲಾಗಿರುತ್ತಾನೆ ಎಂದು ನನಗೆ ವೈಯಕ್ತಿಕ ಮಾಹಿತಿಇರುವುದಿಲ್ಲ, ಆದರೆ ಆತನ ಹೆಂಡತಿ ಹೇಳಿರುತ್ತಾಳೆ. 01 ನೇ ಪ್ರತಿವಾದಿ ಕುಟುಂಬ ಸಮಸ್ಯದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

ಮಾರಾಟದ ಹಣವನ್ನು ಗುರಯ್ಯನ ಹೆಂಡತಿ ಕೈಗೆ ನೀಡಿರುತ್ತಾರೆ. ಸುನಿಲ್ ಹೇಳಿದ ಮೇರೆಗೆ ವ್ಯವಹಾರವಾಗಿದ್ದು ಮತ್ತು ಗುರಯ್ಯ ಹಂಡತಿ ಹಣ ಸ್ವೀಕರಿಸಿರುತ್ತಾಳೆ ಎಂದರೆ ಸಾಕ್ಷೀ ಗುರಯ್ಯ ಮತ್ತು ಆತನ ಹೆಂಡತಿ ಸ್ವೀಕರಿಸಿರುತ್ತಾಳೆ ಎನ್ನುತ್ತಾರೆ. 01 ನೇ ಪ್ರತಿವಾದಿ ಮಕ್ಕಳು ಅಪ್ರಾಪ್ತರಾಗಿದ್ದ ಕಾರಣ ನ್ಯಾಯಾಲಯದಿಂದ ಅನುಮತಿ ಪಡೆರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷೀ ಪ್ರಮಾಣ ಪತ್ರದಲ್ಲಿ 01 ನೇ ಪ್ರತಿವಾದಿ ಮಕ್ಕಳಿಗೆ

ದಾವಾ ಆಸ್ತಿಯಲ್ಲಿ ಹಕ್ಕು ಇತ್ತು ಮತ್ತು ಅವರ ತಾಯಿ ಅವರ ಪರವಾಗಿ ಸಹಿ ಮಾಡಿರುತ್ತಾಳೆಂದು ಬರೆದಿರುತ್ತೇನೆ ಎಂದರೆ ಸರಿ. ನಿ.ಡಿ.01 ರಲ್ಲಿಃ 01 ನೇ ಪ್ರತಿವಾದಿ ಹೆಂಡತಿ ಮಕ್ಕಳ ಪರವಾಗಿ ಸಂರಕ್ಷಣಾಳಗಿ ಸಹಿ ಮಾಡಿರುತ್ತೇನೆ ಎಂದು ಸಹಿ ಇರುವುದಿಲ್ಲ ಎಂದರೆ ಸರಿ. 01 ನೇ ಪ್ರತಿವಾದಿ ಹೆಂಡತಿ ಆಕೆ ತಕರಾರು ಇರುವುದಿಲ್ಲ ಎಂದು ಸಹಿ ಮಾಡಿರುತ್ತಾಳೆ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ 01 ನೇ ಪ್ರತಿವಾದಿ ಹೆಂಡತಿ ಮಕ್ಕಳ ಪರವಾಗಿ ಸಂರಕ್ಷಣಾಳಗಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಸುನಿಲ ಸೇರಿ 01 ನೇ ಪ್ರತಿವಾದಿಯ ಹೆಂಡತಿಯನ್ನು ಮ್ಯಾನೇಜ್ ಮಾಡಿ ಮಾರಾಟದ ಹಣವನ್ನು ಗುರಯ್ಯನಿಗೆ ನೀಡಿದ ಅರ್ಧ ಹಣ ನಾನು ಮತ್ತು ಅರ್ಧ ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಸುನಿಲ್ ಆಸ್ತಿ ಮಾರಾಟದ ಹಣ ಅವರಿಗೆ ಸಿಕ್ಕಿದೆಅದನ್ನ ಮರಳಿ ಕೊಡುತ್ತೀನೆ ಎಂದು ಹೇಳಿ ಅದನ್ನು ಚೆಕ್ಕ ಮುಖಾಂತ ಕೊಡುತ್ತೇನೆಂದು ಒಂದುಚೆಕ್ಕಗುರಯ್ಯನಿಗೆ ನೀಡಿದ್ದುಅದರ ನಗದೀಕರಣಗೂಳ್ಳದೇ ಇದ್ದ ಕಾರಣ ಗುರಯ್ಯ ಸುನಿಲ್‌ನ ವಿರುದ್ದ ಪ್ರಕರಣ ದಾಖಲಿಸಿರುತ್ತಾನೆ ಎಂದರೆಗೊತ್ತಿರುದಿಲ್ಲ. ನಾನುಮತ್ತು ಸುನಿಲ ಸೇರಿ ಗುರಯ್ಯನ ಮಕ್ಕಳಿಗೆ ಮತ್ತು ಗುರಯ್ಯನಿಗೆ ಆಸ್ತಿ ಸಿಗಬಾರದು ಎಂದು ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷೀಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರಯ್ಯನ ಕುಟುಂಬದ ಬಗ್ಗೆ ಮಾಹಿತಿಇರುತ್ತದೆ ಎಂದು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ಇವತ್ತು ಪ್ರಕರಣ ಇದೆ ನ್ಯಾಯಾಲಯಕ್ಕೆ ಬರಲು ವಕೀಲರು ಹೇಳಿರುತ್ತಾರೆ. ಸಾಕ್ಷೀ

ಹೇಳಲು ವಕೀಲರು ಹೇಳಿರುತ್ತಾರೆ ಎಂದರೆ ಸರಿ. ಪ್ರಮಾಣ ಪತ್ರ ವನ್ನು ನಾನೇ ಎರಡು ಮೂರು ದಿನಗಳ ಹಿಂದೆ ತಯಾರಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಇದೇ ದಿನ ತಯಾರಿಸಲಾಗಿ ರುತ್ತದೆ, ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷೀ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.